ಶ್ರೀ ವಿ.ಬಿ. ಭಾವಿ.—ಅಧ್ಯಕ್ಷರೇ, ಕಳೆದ ಒಂದೂವರೆ ತಿಂಗಳ ಹಿಂದೆ ನಾನು ನೋಟೀಸ್ ಕಳು ಹಿಸಿದ್ದೆ. ಮಹಾರಾಷ್ಟ್ರ ಸರ್ಕಾರದವರು, ಆ ಏರಿಯಾದಲ್ಲಿ ಇರುವ ಕನ್ನಡಿಗರಿಗೆ ಕನ್ನಡ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಬಾರದು ಎಂದು ಆಜ್ಞೆ ಮಾಡಿದ್ದಾರೆ. ಅದನ್ನು ಕುರಿತು ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೆ. ಇದುವರೆವಿಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರಿಂದ ಅದನ್ನು ಆಡ್ಮಿಟ್ ಮಾಡಿಲ್ಲ. ಈ ಬಗ್ಗೆ ಪ್ರಸ್ತಾಪ ಬಂದಿದ್ದುದರಿಂದ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಈ ವಿಷಯದ ಬಗ್ಗೆಯೇ ನಾನು ನೋಟೀಸ್ ಕೊಟ್ಟಿದ್ದೇನೆ. ಬಿಜಾಪುರ ಹಾಗೂ ಶೋಲಾಪುರ ಜಿಲ್ಲೆಗಳಲ್ಲಿ ಕನ್ನಡಿಗರು ಅವಂರಣಾಂತ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಾವು ಇವತ್ತು ನೋಟೀಸ್ ಕೊಟ್ಟಿದ್ದೀರಿ. ನೋಡೋಣ.

Papers laid on the table

SRI G B. SHANKAR RAO.—On behalf of the Hon. Chief Minister, I lay:

Order No. HD 126 CNA 80 dated 21st July, 1982.

Exemption of tax for the exhibition of 35 mm. feature films for the Policeman and their family members in the open theatre at District Armed Reserve, Shimoga, as required under Section 22 of the Karnataka Cinemas (Regulation) Act, 1964.

MR. SPEAKER.—Papers laid.

MR. SECRETARY.—I beg to lay on the table of the House the Fourth List of Unstarred Questions and Answers of Seventh Session.

MR. SPEAKER.—Papers laid.

CALLING ATTENTION TO MATTERS OF URGENT PUBLIC IMPORTANCE

(i) *Issue of Spoiled rice to the Taluk Agricultural Produce Marketing Co-operative Socicty, Hassan.*

SRI K.H. HANUMEGOWDA.—I call the attention of the Minister for Food and Civil Supplies regarding issue of 100 quintals of spoiled rice to the Taluk Agricultural Produce Marketing Co-operative Society, Hassan by the authorities of the Food Corporation of India Shimoga Branch.

SRI MANIK RAO PATIL.—Sir, I wish to make the following statement:

೧. ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಚ್. ಹನುಮೇಗೌಡ ಅವರು ಮತ್ತು ಪಿ.ಎನ್. ರೆಡ್ಡಿ ಯವರು ಕೇಳಿರುವ ಈ ಪ್ರಶ್ನೆ ಬಗ್ಗೆ ವಿಚಾರಿಸಲಾಗಿದೆ. ವಿವರಗಳು ಹೀಗಿದೆ.—

೨. ಹಾಸನ ಜಿಲ್ಲಾಧಿಕಾರಿಯವರು ನೀಡಿದ ಆಕ್ಕಿ ಬಿಡುಗಡೆ ಆದೇಶ ನಂ. ೮೮೧೪ ದಿನಾಂಕ ೨೭ನೇ ಮೇ ೧೯೮೨ರ ಮೇರೆಗೆ ಅಕ್ಕಿ ಬಟವಾಡೆಯನ್ನು ಪಡೆಯಲು ಶಿವಮೊಗ್ಗದಲ್ಲಿರುವ ಭಾರತದ ಆಹಾರ ಕಾರ್ಪೊರೇಷನ್ನಿನ ಉಪ ಕಚೇರಿಗೆ ಹಾಸನ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರುಕಟ್ಟೆ ಸಂಘದ ಅಧಿಕೃತ ಪ್ರತಿನಿಧಿಯವರು ಹೋದರು. ಆಂಧ್ರಪ್ರದೇಶದಲ್ಲಿ ಸಾಮಾನ್ಯವಾಗಿ ಬೆಳೆಯಲಾಗುತ್ತಿರುವ ''ಗೊಟ್ಟಲು'' ತಳಿಯ ಅಕ್ಕಿಯ ದಾಸ್ತಾನು ಈಗ ಕಾರ್ಪೊರೇಷನ್ನಿನಲ್ಲಿರುವುದೆಂದು ಭಾರತದ ಆಹಾರ ಕಾರ್ಪೊರೇಷನ್ನಿನ ಅಸಿಸ್ಟೆಂಟ್ ಮ್ಯಾನೇಜರವರು ತಿಳಿಸಿದರು. ಕೆಂಪು ಕಣಗಳು ಹೆಚ್ಚಿನ ಪ್ರಮಾಣದಲ್ಲಿರುವ ಈ ಅಕ್ಕಿಯನ್ನು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರುಕಟ್ಟೆ ಸಂಘದ ಪ್ರತಿನಿಧಿಗೆ ತೋರಿಸಲಾಯಿತು ಆದನ್ನು ಪಡೆಯುವಲ್ಲಿ ಪ್ರತಿನಿಧಿಯು ಯಾವ ಆಕ್ಷೇಪಣೆಯನ್ನು ಎತ್ತಲಿಲ್ಲ. ಸಾಮಾನ್ಯವಾಗಿ ಉಪಯೋಗಿಸುವ ದಪ್ಪ ಅಕ್ಕಿಯ ದಾಸ್ತಾನು ದಾವಣಗೆರೆಯಲ್ಲಿರುವ ಕೇಂದ್ರ ಉಗ್ರಾಣ ಕಾರ್ಪೊರೇಷನ್ನಿನ ಗೋಡೌನುಗಳಲ್ಲಿ ಇದೆಯೆಂತಲೂ ದಾವಣಗೆರೆ ಕೇಂದ್ರದಿಂದ ಆದನ್ನು ತೆಗೆದುಕೊಂಡು ಹೋಗಬಹುದೆಂತಲೂ ಪ್ರತಿನಿಧಿಗೆ ಹೇಳಲಾಯಿತು. ಶಿವಮೊಗ್ಗದಿಂದ ''ಗೊಟ್ಟಲು'' ಅಕ್ಕಿಯನ್ನು ತೆಗೆದುಕೊಂಡು ಹೋಗುವ ತರಾತುರಿಯಲ್ಲಿದ್ದ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಂಘದ ಪ್ರತಿನಿಧಿಯು ೧೦ ಮೆಟ್ರಿಕ್ ಟನ್‌ಗಳಷ್ಟು ಅಕ್ಕಿಯನ್ನು ತೆಗೆದುಕೊಂಡು ಹೋದರು. ಆ ಸಮಯದಲ್ಲಿ, ಸಂಘದ ಅಧಿಕೃತ ಪ್ರತಿನಿಧಿಯು ಅಕ್ಕಿಯನ್ನು ಪಡೆದಾಗ ಯಾವೊಂದು ದೂರನ್ನು ಎತ್ತಲಿಲ್ಲ.

೩. ಗೊಟ್ಟಲು ಜಾತಿಯ ಅಕ್ಕಿಯಲ್ಲಿ ಕೆಂಪು ಕಣಗಳ ಪ್ರಮಾಣವು ಹೆಚ್ಚಿರುತ್ತದೆ. ಇದು ಆ ಅಕ್ಕಿಯ ವಿಶೇಷ ಗುಣಲಕ್ಷಣ. ಪಾಲಿಶ್ ಮಾಡಿಸಿದ ಮೇಲೂ ಅದರ ಕೆಂಪು ಬಣ್ಣ ಹಾಗೆಯೇ ಉಳಿದಿರುತ್ತದೆ. ಜನತೆ ಇದನ್ನು ಬಳಸಬಹುದೇ ಬಳಸಬಾರದೇ ಎಂಬ ಬಗ್ಗೆ ತಿಳಿದುಕೊಳ್ಳಲು ಅಕ್ಕಿಯ ಮಾದರಿಯನ್ನು ಜನಾರೋಗ್ಯ ಸಂಸ್ಥೆಯ ವಿಶ್ಲೇಷಣಾಧಿಕಾರಿಯವರಿಗೆ ಕಳುಹಿಸಿದ್ದು, ಅವರಿಂದ ಈ ಅಕ್ಕಿ ಜನರ ಉಪಯೋಗಕ್ಕೆ ಯೋಗ್ಯವಾಗಿಲ್ಲ ಎಂದು ವರದಿ ಬಂದಿದೆ. ಹಾಸನ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ದಾಸ್ತಾನಾಗಿರುವ ಈ ಅಕ್ಕಿಯನ್ನು ಸಾರ್ವಜನಿಕ ವಿತರಣೆಗೆ ಬಿಡುಗಡೆ ಮಾಡಲಾಗಿಲ್ಲ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳು ಭಾರತ ಆಹಾರ ನಿಗಮ ಸಂಸ್ಥೆಗೆ ಈ ಅಕ್ಕಿಯ ಬದಲಾಗಿ ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡಲು ಪತ್ರ ಬರೆದಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಎರಡು ತಿಂಗಳ ಹಿಂದೆ ೧೦೦ ಕ್ವಿಂಟಾಲ್ ಅಕ್ಕಿಯನ್ನು ತಾಲ್ಲೂಕು ವ್ಯವಸಾಯ ಮಾರುಕಟ್ಟೆ ಸಮಿತಿಯವರು ತೆಗೆದುಕೊಂಡು ಬಂದು ಜನಗಳಿಗೆ ಕೊಟ್ಟಿದ್ದಾರೆ. ಸ್ವಲ ಅಕ್ಕಿ ತೆಗೆದುಕೊಂಡು ಬಂದಿದ್ದೇನೆ, ತಮಗೆ ಕಳುಹಿಸಿಕೊಡುತ್ತೇನೆ. ಮನುಷ್ಯರು ತಿನ್ನುವುದು ಇರಲಿ, ನಾಯಿ ಮತ್ತು ಪ್ರಾಣಿಗಳು ತಿನ್ನುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಅಕ್ಕಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅಕ್ಕಿಯನ್ನು ನೋಡಿದ ತಕ್ಷಣ ಅನುಮಾನ ಬಂದು, ಇಷ್ಟು ಕಪ್ಪಾಗಿರತಕ್ಕಂಥ ಅಕ್ಕಿಯನ್ನು ಊಟ ಮಾಡಿದರೆ ಬದುಕುವುದಕ್ಕೆ ಸಾಧ್ಯವೆ ಎಂದು, ಕೂಡಲೇ ಜಿಲ್ಲಾಧಿಕಾರಿಗಳನ್ನು ಕಂಡು, ದಯವಿಟ್ಟು ಈ ಅಕ್ಕಿಯನ್ನು ವಿತರಣೆ ಮಾಡಬೇಡಿ ಕೂಡಲೆ ಅಕ್ಕಿಯನ್ನು ಕೊಡುವುದನ್ನು ನಿಲ್ಲಿಸಿಬಿಡಿ ಎಂದುಹೇಳಿದೆ, ಸ್ವಾಮಿ ಈ ಅಕ್ಕಿಯನ್ನು ಹರಿಜನ ಗಿರಿಜನ ವಾಸ್ಟೆಲ್‌ಗಳಿಗೆ, ಹಿಂದುಳಿದ ವರ್ಗಗಳ ಹಾಸ್ಟಲ್‌ಗಳಿಗೆ, ಅಂಗನವಾಡಿಗಳಿಗೆ ಕೊಡುತ್ತಾರೆ. ಅಲ್ಲಿಸ ಮಕ್ಕಳ ಆರೋಗ್ಯದ ಗತಿ ಏನು ? ವಿವೇಚನೆ ಇಲ್ಲದೇ ಇರತಕ್ಕ ಅಧಿಕಾರಿಗಳು ಈ ಅಕ್ಕಿಯನ್ನು ತೆಗೆದುಕೊಂಡಿದ್ದಾರೆಯೇ ? ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ ಸಂಸ್ಥೆಯ ಅಧಿಕಾರಿಗಳು, ಇದು ಒಂದು ರೀತಿಯ ವರೈಟಿ, ನಮ್ಮ ಹತ್ತಿರ ಇರುವುದೇ ಇದು ತೆಗೆದುಕೊಂಡು ಹೋಗಿ ಎಂದು ಹೇಳಬೇಕಾದರೆ, ಅವರಿಗೆ ವಿವೇಕ ಇದೆಯೇ ? ಫುಡ್ ಕಾರ್ಪೊರೇಷನ್ ಇಂಡಿಯಾದ ಮ್ಯಾನೇಜರ್‌ರವರು ಎಷ್ಟು ಸಾವಿರ ಸಂಬಳ ತೆಗೆದುಕೊಳ್ಳುತ್ತಾರೆ ? ಇಂಥ ಅಕ್ಕಿಯನ್ನು ಸರಬರಾಜು ಮಾಡುವುದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಿಲ್ಲವೇ ? ಈ ದೇಶದ ಬಡವರು, ದೀನ ದಲಿತರು ತಿನ್ನತಕ್ಕ ಆಹಾರದ ಬಗ್ಗೆ ಅಧಿಕಾರವರ್ಗದವರಿಗೆ ಸ್ವಲ್ಪವಾದರೂ ಪ್ರಜ್ಞೆ ಇರಬೇಡವೆ ? ಇದರ ಪರೀಕ್ಷೆಯನ್ನು ಮಾಡಿಸಬೇಕೆಂದು ವೈಸೂರಿನಲ್ಲಿರತಕ್ಕ ಸಿ ಎಫ್.ಟಿ.ಆರ್.ಐ ನವರಿಗೆ ಕಳುಹಿಸಿಕೊಟ್ಟರೆ, ನಾವು ಇಂಥ ಸಣ್ಣ ಸಣ್ಣ ಚಿಲ್ಲರೆ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ವಿಷಯವನ್ನು ಮತ್ತೆ ಜಿಲ್ಲಾಧಿಕಾರಿಗಳ ಹತ್ತಿರ ಬಂದು ಮಾತನಾಡಿ, ಬೆಂಗಳೂರಿನಲ್ಲಿರತಕ್ಕ ಲ್ಯಾಬೋರೇಟರಿಗೆ ಕಳುಹಿಸಿಕೊಡಲಾಯಿತು. ಅಲ್ಲಿಂದ ಬಂದ ವರದಿಯಮೇರೆಗೆ ಅಕ್ಕಿ ವಿಷಪೂರಿತವಾದುದು ಎಂದು ಗೊತ್ತಾಗಿದೆ. ಸೊಸೈಟಿಗಳಲ್ಲಿ ಕೆಲಸ ಮಾಡತಕ್ಕ ಜವಾನರನ್ನು ಅಕ್ಕಿ ತರುವುದಕ್ಕೆ ಕಳುಹಿಸುತ್ತಾರೆ. ಜನತೆಯ

ಆರೋಗ್ಯ ದೃಷ್ಟಿಯಿಂದ ಉತ್ತಮವಾದಂಥ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಂಥ ಜವಾಬ್ದಾರಿ ಯಾರದು ? ಆಂಧ್ರಪ್ರದೇಶದಿಂದ ತೆಗೆದುಕೊಂಡು ಬಂದಂಥ ಸುಮಾರು ೩೦೦ ಟನ್ ಮುಗ್ಗಲು ಅಕ್ಕಿಯನ್ನು ಸ್ಟಾಕ್ ಇಟ್ಟುಕೊಂಡಿದ್ದಾರೆ. ೧೫ ದಿವಸಗಳ ಹಿಂದೆ ಚಿಕ್ಕಮಂಗಳೂರಿನ ಹಾಸ್ಟೆಲ್‌ಒಂದರಲ್ಲಿ ಹೆಣ್ಣುಮಕ್ಕಳು ವಿಷಪೂರಿತ ಆಹಾರ ಸೇವನೆಯಿಂದ ಆಸ್ಪತ್ರೆಗೆ ಸೇರಿಸಲಾಗಿ, ಅಲ್ಲಿ ಒಂದು ಹೆಣ್ಣು ಮಗು ಪ್ರಾಣ ಕಳೆದುಕೊಂಡ ಘಟನೆಯನ್ನು ನಾವೆಲ್ಲಾ ಓದಿದ್ದೇವೆ. ಸಕಾಲದಲ್ಲಿ ಆಸ್ಪತ್ರೆಗೆ ಮಕ್ಕಳನ್ನು ಸೇರಿಸಿದ್ದರಿಂದ ಮಕ್ಕಳ ಪ್ರಾಣ ಉಳಿಯಿತು, ಇಲ್ಲದೇ ಹೋಗಿದ್ದರೆ ಆ ದುರಂತವನ್ನು ಕಣ್ಣಿಂದ ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇಷ್ಟೊಂದು ಬೇಜವಾಬ್ದಾರಿತನದಿಂದ ಅಧಿಕಾರಿಗಳು ವರ್ತಿಸುವುದಾದರೆ, ಈ ದೇಶದ ಬಡವರ ಗತಿ ಏನು ? ಸಿ.ಎಫ್.ಟಿ.ಆರ್.ಐ.ನವರು ಏತಕ್ಕೆ ವಾಪಸ್ಸು ಕಳುಹಿಸಿದರು. ಅಲ್ಲಿನ ಅಧಿಕಾರಿಗಳಿಗೆ ಯಾರು ದುಡ್ಡಿನಿಂದ ಸಂಬಳ ಕೊಡುತ್ತಿದ್ದೀರಿ. ಸಿಎಫ್‌ಟಿಆರ್‌ಐ ಅಧಿಕಾರಿಗಳ ವರ್ತನೆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಹತ್ತಾರು ಮಂಕ್ಕಳು ಸತ್ತು ಹೋಗಿದ್ದರೆ. ಆ ಬಡಪಾಯಿಗಳ ಗತಿ ಏನು ಸತ್ತು ಹೋದಂಥ ಜೀವಗಳನ್ನು ಇವರು ತಂದು ಕೊಡುತ್ತಾರೆಯೇ ? ಪುಡ್ ಕಾರ್ಪೊರೇಷನ್ ಡೈರೆಕ್ಟರ್ ಮನೆ ನಾಯಿ ಈ ಅಕ್ಕಿಯಲ್ಲಿ ಮಾಡಿದಂಥ ಅನ್ನ ತಂದರೆ ನಾನು ರಾಜೀನಾಮೆ ಕೊಡ ತ್ತೇನೆ. ಪರಿಸ್ಥಿತಿ ಗಂಭೀರವಾಗಿದ್ದರೂ ಹಾರಿಕೆ ಉತ್ತರ ಕೊಡುವುದು ಸರಿಯೇ ? ಪಾಯಿಸನ್ ಹಾಕಿದರೂ ಇಲ್ಲ ಎನ್ನುವುದು ಸಾಮಾನ್ಯ ಜನರಿಗೆ ಹೇಗೆ ಗೊತ್ತಾಗುತ್ತದೆ. ಬಾರಿ ಬಾರಿ ಓದಿಕೊಂಡು ತಜ್ಞರು ಎಂದು ಹೇಳಿಕೊಳ್ಳುವಂಥ ಅಧಿಕಾರಿಗಳಿಗೆ ಜವಾಬ್ದಾರಿ ಬೇಡವೆ ? ಮಾನ್ಯ ಸಚಿವರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ, ಹತ್ತಾರು ಪ್ರಾಣಗಳನ್ನು ಬಲಿ ತೆಗೆದಂಕೊಳ್ಳುವಂಥ ಇಂಥ ಅಕ್ಕಿಯನ್ನು ಖರೀದಿ ಮಾಡಿದ ಪುಡ್ ಕಾರ್ಪೊರೇಷನ್ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತೀರಿ ? ವಿವರವಾಗಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ಎನ್. ರೆಡ್ಡಿ.—ಪುಡ್ ಕಾರ್ಪೋರೇಷನ್‌ನವರು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಕೊಟ್ಟಅಕ್ಕಿಯನ್ನು ಸರಬರಾಜು ಮಾಡಿದ್ದಾರೆ. ಮನಷ್ಯರು ತಿನ್ನುವುದಕ್ಕೆ ಆಗದೇ ಇರುವಂಥ ಅಕ್ಕಿ ಯನ್ನು ಹೇಗೆ ತೆಗೆದುಕೊಂಡರು ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆಹಾರ ಧಾನ್ಯ ಗಳನ್ನು ಕೊಂಡುಕೊಳ್ಳುವುದಕ್ಕೆ ಅನುಸರಿಸತಕ್ಕ ನಿಯಮಗಳೇನು ? ನಿಯಮಗಳು ಇದ್ದರೆ, ಅದನ್ನು ಏತಕ್ಕೆ ಪರಿಪಾಲಿಸಲಿಲ್ಲ. ಹಾಲಿ ಸರಬರಾಜು ಮಾಡಿರತಕ್ಕ ಕೊಟ್ಟಕ್ಕಿಯನ್ನು ವಾಪಸ್ಸು ತೆಗೆದುಕೊಳ್ಳು ವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI MANIK RAO PATIL.—Sir, the fact is that every month we get certain amount of allotment from the Government of India. In some months, we get about 10,000 tonnes of rice or in some months we get about 20,000 tonnes of rice. In turn, we make sub-allotment to various agencies like, Taluk Marketing Co-operative Societies all over the State, When we make the allotment, it is the duty of the represntative who takes the delivery to as certain the quality of the rice before taking the delivery. If the quality of the rice released by the Food Corporation of India is not up to the mark, the representative can straight a way refuse to take the delivery. He can write to the Food and Civil Supplies Department of the Government of Karnataka. They will take necessary further action in the matter. The hon.Member, himself has admitted that the representatives were sent to the godowns of the Food Corporation of India. The officials of the Food Coporation of India have clearly told the reprensetative that this the type of rice (a varity grown in Andhra Pradesh). The officials have also told them that if they want better rice, they can take from Davanagere, In spite of this, the represntative of the Hassan Marketing Society has taken uhe delivery. Latter on they

found it difficult to move the rice in the market and then they made a complaint. Immediately we took action. We are taking up this matter with the Government of India. We are taking this issue very seriously We are also writing to the Government of India to fix up certain responsibility with the Food Corporation of India and see that such sub-standard rice is not delivered.

ಶ್ರೀ ಕೆ. ಹೆಚ್. ಹನುಮೇಗೌಡ.—ಅಕ್ಕಿಯನ್ನು ಕೊಂಡು ಕೊಳ್ಳಬೇಕಾದರೆ, ೬ ಪರ್ಸೆಂಟ್ ಪಾಲಿಷ ಮಾಡಬೇಕೆಂಬ ನಿಯಮ ಇದೆ ಎಂದು ಕೇಳಿದ್ದೇನೆ. ಸ್ಯಾಂಪಲ್ ಇದೆ ಕಳುಹಿಸಿಕೊಡುತ್ತೇನೆ ನೋಡಿ. ಎಷ್ಟು ಪರ್ಸೆಂಟ್ ಪಾಲಿಷ ಆಗಿದೆ ಎನ್ನುವುದು ಗೊತ್ತಾಗುತ್ತದೆ ಇನ್ನು ತಾಲ್ಲೂಕು ವಟ್ಟದ ಸೊಸೈಟಿಗಳು ವ್ಯಾಪಾರಕ್ಕೆ ಹೋಗುತ್ತಿಲ್ಲ ಪದಾರ್ಥಗಳನ್ನು ತಂದು ಇಲ್ಲಿ ಲಾಭ ಮಾಡ ಬೇಕಾಗಿಲ್ಲ ಫುಡ್ ಕಾರ್ಪೊರೇಷನ್ನವರು ವ್ಯಾಪಾರಕ್ಕಾಗಿ ಧಾನ್ಯಗಳನ್ನು ಕೊಳ್ಳಬೇಕಾಗಿಲ್ಲ, ಒಳ್ಳೆಯ ಧಾನ್ಯಗಳನ್ನು ಕಲೆಕ್ಟ್ ಮಾಡಿ, ಸರಿಯಾದ ರೀತಿಯಲ್ಲಿ ಜನಗಳಿಗೆ ಕೊಡಬೇಕಾದದು ಅವರ ಕರ್ತವ್ಯ. ಮುಗ್ಗಲು ಅಕ್ಕಿಯನ್ನು ಕೊಂಡು ಜನಗಳಿಗೆ ಕೊಡುವಂಥ ಧೈರ್ಯ ಅಧಿಕಾರಿಗಳಿಗೆ ಹೇಗೆ ಬಂತು? ಮಾನ್ಯ ಮಂತ್ರಿಯವರು ಅಧಿಕಾರಿಗಳನ್ನು ಷೀಲ್ಡ್ ಮಾಡುವುದರಿಂದ ಅವರು ಬೆನ್ನು ತಟ್ಟುವುದರಿಂದ ಇಂಥವು ಮುಂದಕ್ಕೂ ನಡೆಯುತ್ತವೆ. ಅಲಾಟ್‌ಮೆಂಟ್ ಮಾಡಿದ್ದನ್ನು ತಂದು ಜನಗಳಿಗೆ ಹಂಚಿದ್ದಾರೆ. ಕೆಟ್ಟ ಅಕ್ಕಿಯನ್ನು ಏತಕ್ಕೆ ಕೊಂಡರು ಅದಕ್ಕೆ ಉತ್ತರ ಹೇಳಿ. ಅಕ್ಕಿ ಕೆಟ್ಟು ಹೋಗಿದೆ ಎನ್ನುವುದು ಎಂಥವರಿಗೂ ಗೊತ್ತಾಗುತ್ತದೆ, ನಿಮ್ಮ ಅಧಿಕಾರಿಗಳಿಗೆ ಗೊತ್ತಾಗಲಿಲ್ಲವೆ? ವಿಷಯಾರಿತವಾದ ೩೦೦ ಕ್ವಿಂಟಾಲ್ ಅಕ್ಕಿ ಬಂದು ಗೋಡೌನ್ ಭರ್ತಿ ಇದೆ. ಲಕ್ಷಾಂತರ ರೂಪಾಯಿ ಮಾಲು ಇದೆ. ಇದನ್ನು ಹೇಗೆ ಜನಗಳಿಗೆ ಹಂಚುತ್ತೀರಿ? ನಿಮ್ಮ ಮನೆಯಲ್ಲಿ ಯಾರು ಇದನ್ನು ತಿನ್ನುವುದಿಲ್ಲ. ಬಡವ ಏನಾದರೂ ತಿಂದು ಸತ್ತಿದ್ದರೆ, ನೀವು ಜವಾಬ್ದಾರರಾಗುತ್ತಿದ್ದೀರಾ? ನಿಮ್ಮ ಅಧಿಕಾರಿಗಳು ಜವಾಬ್ದಾರರಾಗುತಿದ್ದೀರಾ? ಕೊಡಬಾರದ ಅಕ್ಕಿಯನ್ನೆಲ್ಲಾ ಕೊಟ್ಟು ಈ ರೀತಿ ಮಾಡಿದರೆ ಯಾರು ಜವಾಬ್ದಾರರು?

(INTERRUPTIONS)

ಅಧ್ಯಕ್ಷರು.—ಮಾನ್ಯ ಸದಸ್ಯರು ಸ್ವಲ್ಪ ನಿಧಾನವಾಗಿ ಕೇಳಿ ಏನು ಆಕಾಶ ಕಳಚಿ ಬಿದ್ದು ಹೋಯಿತೇನು? ಸ್ವಲ್ಪ ನಿಧಾನವಾಗಿ ಕೇಳಿ. The Minister is hearing you. He is not resisting you. What do you think? Whether this is the House or what is it?

ಶ್ರೀ ಕೆ. ಹೆಚ್. ಹನುಮೇಗೌಡ.—This is the House.....ಇದು ಹೌಸ್ ಸ್ವಾಮಿ ನಾನು ಇಲ್ಲ ಅಂತ ಹೇಳುವುದಿಲ್ಲ.

ಅಧ್ಯಕ್ಷರು.—ಸ್ವಲ್ಪ ನಿಧಾನವಾಗಿ ಹೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರಿಗೆ ತೋರಿಸಬೇಕಲ್ಲ ಸ್ವಾಮಿ ನಾನು ತೆಗೆದುಕೊಂಡು ಹೋಗಿ ಕೊಡಲಿಕ್ಕಾಗುತ್ತದಾ?

MR. SPEAKER.—I am on my legs. Please resume you seat, There is no protest from the Minister also. Please bring to his notice, whatever you want to say, This is for the third time you are calling the Attender. You make your submission in a nice way. The Minister is hearing you. There is no reason for getting worked up at all.

ಶ್ರೀ ಕೆ. ಹೆಚ್. ಹನುಮೇಗೌಡ —ಅಧ್ಯಕ್ಷರೆ ಕಾಮಾಗಿ ಹೇಳಿಬಿಟ್ಟು ಸುಮ್ಮನೆ ಕುಳಿತು ಕೊಂಡರೆ ನಮಗೆ ಎಷ್ಟು ನೋವಾಗುತ್ತದೆ. ನಮಗೆ ಏನು ಸಂಕಟ ಅಂದರೆ ಇದನ್ನು ಮನುಷ್ಯರು ನೋಡ ಲಿಕ್ಕೂ ಅಸಹ್ಯವಾಗುತ್ತಿದೆ. ಇದನ್ನು ಊಟ ಮಾಡುವುದು ಇರಲಿ ಕೈಗೆ ಹಾಕಿಕೊಂಡು ನೋಡಲಿಕ್ಕೂ

ಅಸಹ್ಯವಾಗುತ್ತಿದೆ. ೨೨೦ ರೂಪಾಯಿ ಪ್ರಕಾರ ಕ್ವಿಂಟೋಲ್ ಅಕ್ಕಿಯನ್ನು ಮಾರಾಟ ಮಾಡಲಿಕ್ಕೆ ಬಿಡುಗಡೆ ಮಾಡಿದರು ಅಂದರೆ, ನಿಮ್ಮ ತಾಲ್ಲೂಕು ಸೊಸೈಟಿಯಿಂದ ತಂದರು ಅಂಥ ಹೇಳಿದರೆ, ತಾಲ್ಲೂಕು ಸೊಸೈಟಿಯವರು ಜವಾಬ್ದಾರರೇನು ? ಅವರೇನಾದರೂ ಓಪನ್ ಮಾರ್ಕೆಟ್‌ನಲ್ಲಿ ತೆಗೆದು ಕೊಂಡು ಬಂದು ಡಿಸ್ಟ್ರಿಬ್ಯೂಟ್ ಮಾಡಿದರೆ ಆಗ ಅವರಿಗೆ ಕೋಟ್ ಮಾಡಿ ಹೇಳಬಹುದು, ಇವರೇನು ಬಿಸಿನೆಸ್ ಮಾಡುತ್ತಿದ್ದಾರಾ ? ಇವರು ಅಫಿಷಿಯಲ್ಸ್ ಮಂರ್ಚೆಟ್‌ಗಳಾ ? ಒಳ್ಳೆಯ ಆಹಾರ ಪದಾರ್ಥ ಕೊಂಡಿಟ್ಟು ಸರಿಯಾದಂಥ ವ್ಯವಸ್ಥೆಯನ್ನು ಮಾಡಬಾರದಾ ?

ಅಧ್ಯಕ್ಷರು.—ಕರ್ನಾಟಕ ಸರ್ಕಾರ ಮಾಡಿಲ್ಲ. ಕರ್ನಾಟಕ ಸರ್ಕಾರ ಅಲಾಟ್‌ಮೆಂಟ್ ಮಾಡಿದೆ. ಫುಡ್ ಕಾರ್ಪೊರೇಷನ್‌ನಲ್ಲಿ ಅಂಥ ಮಾಲು ಇದೆ. ಅದು ಸರಿಯಿಲ್ಲ ಅಂಥ ನಾವು ಹೇಳಿ, ಅದರ ಬಗ್ಗೆ ಡೆಪ್ಯುಟಿ ಕಮಿಷನರ್ ಅವರು ಪಾಪಸ್ಸು ಕಳುಹಿಸಿದ್ದಾರೆ. ಅದೆಲ್ಲಾ ವಿವರ ಇದೆ. ತಮ್ಮ ಪಾಯಿಂಟ್ ಏನು, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಈ ತರಹ ಪಾಲನ್ನು ಏತಕ್ಕೆ ಮಾರಾಟ ಮಾಡುತ್ತಿದ್ದಾರೆ ಎನ್ನುವ ಅಂಶವನ್ನು ನಾವು ಕೇಳಬೇಕಾಗಿದೆ ಅದನ್ನು ಕೇಳಿ. ನಾವು ಹೇಳತಕ್ಕದ್ದನ್ನು ಸರ್ಕಾರಕ್ಕೆ ಯಾವ ರೀತಿ ಹೇಳಬೇಕೋ ಹೇಳಿ, ನಾನು ಹೇಳಬಾರದು ಅಂಥ ತಮಗೆ ಹೇಳುವುದಿಲ್ಲ, ಸುಮ್ಮನೆ ಇದ್ದಕ್ಕಿದ್ದ ಹಾಗೆ ರೇಗಿಬಿಟ್ಟರೆ ಹೇಗೆ ?

ಶ್ರೀ ಕೆ. ಪೆಚ್. ಹನುಮೇಗೌಡ.—ನಾನು ಯಾವ ತರಹ ಹೇಳಲಿ.

ಶ್ರೀ ಜಿ. ರಾಮೇಗೌಡ.—ಸಾರ್, ನಾನು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷನಾಗಿದ್ದೆ. ಆಹಾರ ಮಂತ್ರಿಯಾಗಿದ್ದೆ. ಮಾನ್ಯ ಮಂತ್ರಿಗಳು ಹೇಳಿದರು, ಆಕ್ಕಿ ತರುವವನು ಆಫೀಸರ್ ಸ್ವಲ್ಪ ಬುದ್ಧಿವಂತನಾಗಬೇಗಿತ್ತು. ಎಂತಾದ್ದ ಇದೆಯೋ ಎಂತಾದ್ದು ಇಲ್ಲವೋ ನೋಡಿ ತರ ಬೇಕಾಗಿತ್ತು, ಅಂಕ ಅಂದಾಗ ಈ ಯಪ್ಪನಿಗೆ ರೇಗಿತು ಮಾನ್ಯ ಹನುಮೇಗೌಡರಿಗೆ ಬ್ಲಡ್ ಪ್ರಜರ್ ಇದೆ.

ಅಧ್ಯಕ್ಷರು.—ನೀವು ಈ ಯಪ್ಪನಿಗೆ ಅಂತ ಹೇಳುವ ಹಾಗೆ ಇಲ್ಲ. ಮಾನ್ಯ ಸದಸ್ಯರಿಗೆ ಕೋಪ ಬಂತು ಅಂತ ಹೇಳಬೇಕು:

ಶ್ರೀ ಜಿ. ರಾಮೇಗೌಡ.—ಸನ್ಮಾನ್ಯ ಸದಸ್ಯರಿಗೆ ಬ್ಲಡ್ ಪ್ರಜರ್ ಇದೆ. ಅದು ತಮ್ಮ ಗಮನದಲ್ಲಿದೆ ಅವರು ಸುಮ್ಮನೆ ಇರುತ್ತಾರೆ, ಅವರು ಒಂದು ತರಹ ಶಾಂತಿ ಸ್ವಭಾವ ನಂತರ ಗುದ್ದೋ ಸ್ವಭಾವ, ಆವರು ಒಂದೊಂದು ಉತ್ತರದಲ್ಲೂ ಒಂದೊಂದು ಪದ ಗುದ್ದಿದರು. ಅಧಿಕಾರಿ ಹೋಗಿ ಏತಕ್ಕೆ ತರಲಿಲ್ಲ ಅಂದರೆ, ಯಾವ ಸಹಕಾರ ಸಂಘದಲ್ಲೂ ಅಧಿಕಾರಿ ಹೋಗಿ ಅಕ್ಕಿಯನ್ನು ಸೆಲೆಕ್ಟ್ ಮಾಡುವುದಿಲ್ಲ, ಇದು ಡಿಸ್ಟ್ರಿಬ್ಯೂಷನ್ ಹೇಗೆ ಅಂದರೆ ಲಾರಿ ಕಳುಹಿಸುತ್ತಾರೆ, ಪರ್‌ಮಿಟ್ ಕಳುಹಿಸುತ್ತಾರೆ ಅಲ್ಲಿ ತುಂಬಿ ಕಳುಹಿಸುತ್ತಾರೆ ಅದು ತುಂಬಿ ಕಳುಹಿಸುವವರ ಜವಾಬ್ದಾರಿ, ಇವರಿಗೆ ಜನರಲ್ಲಿ ಒಂದು ಆಸಕ್ತಿ ಇದ್ದುದರಿಂದ ಹೋಗಿ ನೋಡಿದ್ದಾರೆ ಇಲ್ಲದೇ ಇದ್ದರೆ, ಎಷ್ಟು ಜನ ಸಾಯುತ್ತಿದ್ದರೋ ಆದ್ದರಿಂದ, ಈ ಸೊಸೈಟಿ ಅಧಿಕಾರಿಗಳ ಜವಾಬ್ದಾರಿ ಅಂತ ಹೇಳಿದ್ದು ಅವರ ತಪ್ಪು ಅಂತ ಅನ್ನುವುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ, ಹಾಗೆ ಹೇಳಬಾರದು ಜವಾಬ್ದಾರಿಯುತವಾದ ಕೆಲಸ ಇದೆ. ಇವರು ಅಕ್ಕಿಯನ್ನು ಹೋಗಿ ನೋಡಿಲ್ಲ. ಅದನ್ನು ನೋಡಬಾರದೇನು ? ಅದಕ್ಕೆ ನಾನು ಪ್ರತಿ ಅಮಾವಾಸ್ಯೆಯ ದಿವಸ ಗೋಡೌನ್‌ಗೆ ಹೋಗುತ್ತಿದೆ. ಅದು ಬಹಳ ಒಳ್ಳೆಯ ದಿನ ಕೆಟ್ಟದೆಲ್ಲಾ ಕಾಣಿಸುತ್ತದೆ ಅಂತ ನಾನು ಹೋಗುತ್ತಿದ್ದೆ. ಇವರು ಅಮಾವಾಸ್ಯೆಯ ದಿವಸ ಹೋಗುತ್ತಾರೇನು ಕೇಳಿ ಈ ಸರ್ಕಾರದವರು ಪೂರ್ಣಿಮೆಗೂ ಹೋಗುವುದಿಲ್ಲ, ಅಮಾವಾಸ್ಯೆಗೂ ಹೋಗುವುದಿಲ್ಲ. ಅಕ್ಕಿಯನು . ಇನ್ಸ್‌ಪೆಕ್ಷನ್ ಮಾಡುವುದಿಲ್ಲ, ಆದರಿಂದ ಅನ್ಯಾಯ ನಡೆಯುತ್ತಿದೆ, ಆದ್ದರಿಂದ, ಅವರ ಮೇಲೆ ದಯ ವಿಟ್ಟು ನೀವು ಸಿಟ್ಟು ಮಾಡಿ ಕೊಳ್ಳಬೇಡಿ.

ಅಧ್ಯಕ್ಷರು.— ನಾನು ಸಿಟ್ಟುಮಾಡಿಕೊಳ್ಳುವುದಿಲ್ಲ, ಇಲ್ಲಿ ಕೆಲಸ ಮಾಡುವವರ ಮೇಲೆ ಅವರು ಸಿಟ್ಟಾಗುತ್ತಿದ್ದಾರೆ. ನಾನು, ನೀವು ಸಿಟ್ಟಾಗುವುದು ಏನು ಬಂತು.

ಶ್ರೀ ಕೆ. ಪೆಚ್. ಹನುಮೇಗೌಡ.—ಚಿಕ್ಕಮಗಳೂರಿನಲ್ಲಿ ಒಂದು ಹುಡುಗಿ ಸತ್ತು, ೬೦ ಹುಡಗರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಬೇಕಾಗಿ ಅವರ ತಂದೆ ತಾಯಿಗಳು ಎಷ್ಟು ನೊಂದುಕೊಂಡಿದ್ದರು ಅದು ನನಗೆ ಗೊತ್ತು. ಅದನ್ನು ಗಮನಿಸಿ ಈ ಮಾತನ್ನು ಹೇಳಂತಿದ್ದೇನೆ, ಈ ಅಕ್ಕಿಯನ್ನು ಕೈಯಲ್ಲಿ ಇಟ್ಟು ಕೊಳ್ಳಲಿಕ್ಕೆ ಅಸಹ್ಯವಾಗುತ್ತಿದೆ. ಈ ಅವಸ್ಥೆಯಲ್ಲಿರತಕ್ಕ ಪದಾರ್ಥವನ್ನು ಯಾವ ಧೈರ್ಯದ ಮೇಲೆ

ಕೊಟ್ಟರು. ಇದನ್ನು ಕೊಟ್ಟಂಥ ಅಧಿಕಾರಿಗೆ ಕಾನ್‌ಷನ್ಸ್ ಇರುವುದಿಲ್ಲವೇ ? ಇದನ್ನು ಅವರು ತಿನ್ನುತ್ತಾರೆಯೇ ? ಅವರ ಹೆಣ್ಣುಮಕ್ಕಳು ತಿನ್ನುತ್ತಾರೆಯೆ ? ಏನೋ ಪಾಪ ಮಾಡಿ ಈ ದೇಶದಲ್ಲಿ ಹುಟ್ಟಿದ್ದಾರೆ ಅಂಥ ಆ ಬಡವರನ್ನು ಈ ರೀತಿಯಲ್ಲಿ ಕೊಲೆ ಮಾಡುತ್ತಾ ಹೋದರೆ ದೇವರು ನಮಗೆ ಒಳ್ಳೆಯದು ಮಾಡುತ್ತಾನೆಯೇ ? ಇವೊತ್ತು ಬಡವರ ಬೇವರಿನಲ್ಲಿ ಈ ದೇಶ ಕಟ್ಟಿರುವುದು ಭೂಮಿ ಉಳುವವರು ಅವರು ಬಿಲ್ಡಿಂಗ್ ಕಟ್ಟುವವರು ಅವರು, ಅವರು ತೀರಾ ಬೇಕು ಅಂದರೆ, ಸೈನ್ಯಕ್ಕೆ ಹೋಗಿ ತಮ್ಮ ರಕ್ತ ಕೊಟ್ಟು ನಮ್ಮನ್ನು ಕಾಪಾಡುತ್ತಾರೆ. ಉಳಿದವರು ಇಲ್ಲಿ ಫೋನ್‌ನಲ್ಲಿ ಮಾತನಾಡಿ ಕೊಂಡು ಇರುತ್ತಾರೆ. ನಮಗೆ ಓಟು ಬರುವುದು ಅವರಿಂದ, ಇಂಥ ಬಡ ಜನರ ಬಗ್ಗೆ ನಿರ್ದಾಕ್ಷಿಣ್ಯ ವಾಗಿ ನಡೆದುಕೊಂಡರೆ, ನಮ್ಮನ್ನು ಯಾವ ದೇವರು ತಾನೇ ಕ್ಷಮಿಸುತ್ತಾನೆ ? ಎಷ್ಟೋ ಜನ ತಂದೆತಾಯಂದಿರು ಪ್ರೀತಿಯಿಂದ ತಮ್ಮ ಮಕ್ಕಳನ್ನು ಸಾಕಿ, ನಾಲ್ಕು ಅಕ್ಷರ ಕಲಿಸಲಿಕ್ಕೆ ಪ್ರಯತ್ನ ಪಡುತ್ತಾರೆ. ಅಂತಾದ್ದರಲ್ಲಿ ಆ ಮಕ್ಕಳುಗಳಿಗೆ ಏನಾದರೂ ಆದರೆ ಅವರು ಎಷ್ಟು ಸಂಕಟಪಡು ತ್ತಾರೆ ಅದನ್ನು ಹೇಳಲಿಕ್ಕೆ ಆಗುವುದಿಲ್ಲ ಏನಾದರೂ ಆ ಮಕ್ಕಳಿಗೆ ಆಪಾಯವಾದರೆ, ಕೋಟಿ ರೂಪಾಯಿ ಕೊಟ್ಟರು ಆ ತಂದೆತಾಯಿಗಳ ಸಂಕಟ ಹೋಗಲಾಡಿಸಲಿಕ್ಕೆ ಆಗುತ್ತದೆಯೇ ? ನಾವು ಆ ಮಕ್ಕಳ ಜೀವ ವಾಪಸ್ಸು ತಂದುಕೊಡಲಿಕ್ಕೆ ಆಗುತ್ತದೆಯೇ ? ಇಂಥ ಸೀರಿಯಸ್ ವಿಚಾರವನ್ನು ಹೇಳಿದಾಗಲೂ ಮಾನ್ಯ ಸಚಿವರು ಈ ರೀತಿ ಉತ್ತರ ಹೇಳಿದರೆ ನನ ಸಂಕಟವಾಗುವುದಿಲ್ಲವೇ ? ಈ ಅಕ್ಕಿಯನ್ನು ಯಾರು ತಂದರು ? ಇದನ್ನು ತಂದು ಎಷ್ಟು ದಿವಸ ಆಯಿತು ? ಇದಕ್ಕೆ ಏನೇನು ಪೌಡರ್ ಮಿಕ್ಸ್ ಮಾಡಿದ್ದರು. ಇದು ಪಾಯಿಸನ್ ಆಗಿದೆ ಅಂಥ ಗೊತ್ತಾದರೂ ಏತಕ್ಕೆ ಬಿಡುಗಡೆ ಮಾಡಿದರು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಇನ್ನು ಮುಂದೆ ಇಂತಹ ಅನಾಹುತ ಆಗುವುದನ್ನು ತಪ್ಪಿಸುತ್ತೀರಾ ? ನಮ್ಮ ಕಾಲದಲ್ಲಿ ಆಗಿರತಕ್ಕ ಪಾಪವನ್ನು ದೇವರು ಒಂದು ದಿವಸ ಪ್ರಶ್ನೆ ಮಾಡುತ್ತಾನೆ. ನೀನು ಅಧಿಕಾರಿ ಸ್ಥಾನದಲ್ಲಿ ಇರಲಿಲ್ಲವೇ ? ಇಂಥ ನಿರ್ಭಾಗ್ಯ ಜೀವಿಗಳನ್ನು ಏತಕ್ಕೆ ಈ ರೀತಿ ಮಾಡಿದೆ ಅಂಥ ನಾವು ಮೇಲೆ ಹೋದಾಗ ಪ್ರಶ್ನೆ ಕೇಳು ತ್ತಾನೆ. ಇವೊತ್ತು ವಿವೇಚನೆ ಇಲ್ಲದೆ, ನಿರ್ದಾಕ್ಷಿಣ್ಯವಾಗಿ ಬಡವರ ಅನಾಹುತಕ್ಕೆ ಕಾರಣರಾದ ಅಧಿಕಾರಿ ಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಕಟ್ಟುನಿಟ್ಟಾಗಿ ಮಾನ್ಯ ಸಚಿವರು ಹೇಳಬೇಕು.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಅಧ್ಯಕ್ಷರೆ, ಬಹುಶಃ ಶ್ರೀಮಾನ್ ಹನುಮೇಗೌಡರು ನಾನು ಹೇಳಿದ್ದು ಅರ್ಥಮಾಡಿಕೊಂಡಿಲ್ಲ ಎಂದು ಕಾಣಿಸುತ್ತದೆ. ನಾನು ಮಾನ್ಯ ಸದಸ್ಯರಿಗೆ ಬಹಳ ಕ್ಲಿಯರ್ ಆಗಿ ಹೇಳಿದ್ದೇನೆ. ಅಕ್ಕಿ ಬರತಕ್ಕಂತಾದ್ದು ಕೇಂದ್ರ ಸರ್ಕಾರದಿಂದ. ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಅಕ್ಕಿ ಸಂಗ್ರಹ ಮಾಡಿದ್ದು ಅಲ್ಲ. ಪ್ರತಿ ತಿಂಗಳು ೧೦-೨೦ ಸಾವಿರ ಟನ್ ಕೇಂದ್ರದಿಂದ ನಾವು ತೆಗೆದು ಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂಥ ಕಾರ್ಪೊರೇಷನ್ ಯಾವ ಯಾವ ಇಲಾಖೆ ಯಲ್ಲಿ ಕಡಿಮೆ ಇದೆ ರೈಸು, ಅಲ್ಲಿಗೆ ತಮ್ಮ ಗೋಡೌನ್‌ನಿಂದ ವಿತರಣೆ ಮಾಡುತ್ತಾರೆ. ನಾವು ಸಬ್ ಅಲಾಟ್‌ಮೆಂಟ್, ಹೋಲ್‌ಸೇಲ್ ಡೀಲರ್ಸ್ ಅಥವಾ ಕೋ ಆಪರೇಟೀವ್ ಸೊಸೈಟಿಗಳು ಏನು ಅವರ ಡೆಲಿವರಿ ತೆಗೆದುಕೊಳ್ಳುತ್ತಾರೋ ಅವರು ತೆಗೆದುಕೊಳ್ಳುವಾಗ ಅದರ ಬಗ್ಗೆ ಕಟ್ಟುನಿಟ್ಟಾದ ಕಾನೂನು ಕಾಯಿದೆ ಏನೂ ಇಲ್ಲ. ಅವರ ಮೇಲೆ ಜವಾಬ್ದಾರಿ ಎಷ್ಟು ಇದೆ ಅಂದರೆ ಒಳ್ಳೆಯ ರೈಸ್ ಕೊಡುವುದು ಅವರ ಜವಾಬ್ದಾರಿ ಇದೆ.

೩-೦೦ ಪಿ. ಎಂ.

ಫುಡ್ ಕಾರ್ಪೊರೇಷನ್ ಗೋಡೌನ್‌ನಲ್ಲಿದ್ದಂಥ ಅಧಿಕಾರಿ ಬಹಳ ವಿವರವಾಗಿ ಹೇಳಿಕೆಯನ್ನು ಕೊಟ್ಟಿದ್ದಾನೆ. ಈ ಅಕ್ಕಿ ಒಳ್ಳೆಯ ಅಕ್ಕಿಯಲ್ಲ. ಇದಕ್ಕಿಂತ ಒಳ್ಳೆಯ ಅಕ್ಕಿ ನಿಮಗೆ ಬೇಕಾದರೆ ನೀವು ದಾವಣಗೆರೆ ಗೋಡೌನ್‌ಗೆ ಹೋಗಿ ತೆಗೆದುಕೊಳ್ಳಿ ಎಂದು ಹೇಳಿದ್ದಾನೆ. ಆದರೆ ಇವರು ಯಾವ ಅಧಿಕಾರಿ ಯನ್ನು ಕಳುಹಿಸಿದ್ದರು ಆತ ಬಹಳ ಆತುರವಾಗಿ ಇದ್ದ ಎಂದು ಕಾಣಿಸುತ್ತದೆ. ಆತ ಇದೇ ಅಕ್ಕಿಯನ್ನೇ ತೆಗೆದುಕೊಂಡು ಹೋಗಿ ವಿತರಣೆಗೆ ಕೊಟ್ಟಿದ್ದಾನೆ. ಇದು ಗೊತ್ತಾದಮೇಲೆ ನಾವು ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ. ಅಕ್ಕಿ ವಿತರಣೆ ಮಾಡುವುದನ್ನು ನಿಲ್ಲಿಸಿದ್ದೇವೆ. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ನಾವು ಪತ್ರವನ್ನು ಬರೆದು, ಇಂಥ ಸಬ್ ಸ್ಟ್ಯಾಂಡರ್ಡ್ ಅಕ್ಕಿಯನ್ನು ನಿಮ್ಮ ಗೋಡೌನ್‌ನಿಂದ ಕಳುಹಿಸಲಾಗಿತ್ತಿದ್ದಾರೆ. ಆ ಗೋಡೌನ್‌ನಿಂದ ಬರುತ್ತಿರುವ ಅಕ್ಕಿಯನ್ನು ಯಾವ ಮನುಷ್ಯರೂ ತಿನ್ನುವುದಕ್ಕೆ ಸಾಧ್ಯವೇ ಇಲ್ಲ ಅಂಥಾದ್ದನ್ನು ಸಂಗ್ರಹಣೆ ಮಾಡಿಟ್ಟಿದ್ದಾರೆ. ನೀವು

ತಕ್ಷಣ ಆ ಅಧಿಕಾರಿ ಯಾರಿದ್ದಾನೆ ಆತನಮೇಲೆ ಕ್ರಮತೆಗೆದುಕೊಂಡು ಮುಂದಿನ ತನಿಖೆ ಮಾಡಬೇಕೆಂದು ತಿಳಿಸಿದ್ದೇವೆ. ಇದು ವಾಸ್ತವಾಂಶ. ಆದರೂ ಮಾನ್ಯ ಸದಸ್ಯರಾದ ಹನುಮೇಗೌಡರು ಏತಕ್ಕೆ ಇಷ್ಟು ಕೋಪದಿಂದ ಮಾತನಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. With all seriousness the Government of Karnataka has taken necessary steps to impress upon the Government of India that this is not the only instance. We are hearing complaints from other areas also. Advise your local officers to see that good rice is supplied wherever we make sub-allotment. We have made it very clear. If the hon. Member wants that some more action should be taken, I would not mind to take this issue myself personally with the Ministry of Agriculture to explain what is happening in Karnataka.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಕನಿಷ್ಟ ೬ ಪರ್ಸೆಂಟ್ ಆದರೂ ಪಾಲಿಷ್ ಮಾಡಲೇ ಬೇಕೆಂದು ಒಂದು ನಿಯಮ ಇದೆ. ಅದರ ಪ್ರಕಾರವಾದರೂ ತಾವು ಕನಿಷ್ಟ ೬ ಪರ್ಸೆಂಟ್ ಪಾಲಿಷ್ ಮಾಡಿಸಿ ಕಳುಹಿಸಿದರೆ ಈ ಜನರ ಆರೋಗ್ಯ ಸುಧಾರಿಸುತ್ತದೆ. ಹಿಂದೆ ಇಂಥದೇ ಒಂದು ಪ್ರಸಂಗ ಬಂದಾಗ ಮಾನ್ಯ ರಾಮೇಗೌಡರು ತಮ್ಮ ಅಧಿಕಾರಿಗಳಿಗೆ ಒಂದು ಸ್ಪೆಷಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟರು. ಅವತ್ತಿನಿಂದ ೬ ಪರ್ಸೆಂಟ್‌ಗಿಂತ ಕಡಿಮೆ ಪಾಲಿಷ್ ಇದ್ದರೆ ಅಂಥ ಅಕ್ಕಿಯನ್ನು ವಿತರಣೆಗೆ ಕೊಡುವುದೇ ಇಲ್ಲ. ಅಲ್ಲದೆ ಅದನ್ನು ಕೊಟ್ಟರೆ ತೆಗೆದುಕೊಳ್ಳುವುದೂ ಇಲ್ಲ. ಆದ್ದರಿಂದ ತಾವು ಕೂಡಲೇ ಈ ಅಕ್ಕಿಯನ್ನು ರೆಫ್ಯೂಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಪತ್ರವನ್ನು ಬರೆದು ೬ ಪರ್ಸೆಂಟ್ ಪಾಲಿಷ್ ಮಾಡಿಸಿ ಕೊಡುವಂತೆ ಹೇಳಬೇಕು. ಮತ್ತು ಹಳೇ ಸ್ಟಾಕ್ ಏನಾದರೂ ಇದ್ದರೆ ಅದನ್ನು ಕೆಮಿಕಲ್ ಎಕ್ಸಾಮಿನೇಷನ್ ಮಾಡಿಸಿ ಅದು ಉಪಯೋಗಕ್ಕೆ ಯೋಗ್ಯವಾಗಿದೆಯೇ ? ಇಲ್ಲವೆ ? ಎಂಬುದಾಗಿ ಸರ್ಟಿಫೈ ಮಾಡಿಸಿ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೀರಾ ?

SRI M NIKRAO PATIL.—By and large there are three types of rice which are being supplied through the Public Distribution system. One is 'fine'; second is 'medium' and third is 'coarse'. All these varieties are given polish with different proportions. Generally so far as 'fine' rise is concerned, the Corporation authorities give the polish to the extent of 6% and some times more than that. But 'coarse' variety, which is to be sold at a lower rate and which is generally consumed by poorer sections of the society, is not given polish to the extent of 6%. There are certain specifications.

ಶ್ರೀ ಕೆ. ಹೆಚ್. ಹನುಮೇಗೌಡ.—ದುಡ್ಡು ಕೊಟ್ಟು ಅಕ್ಕಿಯನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ಪರ್ಸೆಂಟ್ ಪಾಲಿಷ್ ಮಾಡಿರಬೇಕೆಂದು ನಿಯಮ ಇದೆ ಅದರ ಪ್ರಕಾರ ನೀವು ಎಷ್ಟು ಪರ್ಸೆಂಟ್ ಪಾಲಿಷ್ ಮಾಡಿಸಬೇಕೆಂದು ಆದೇಶ ಕೊಟ್ಟಿದ್ದೀರಿ ? ಫೈನ್ ರೈಸ್‌ಗೆ ಎಷ್ಟು ಪರ್ಸೆಂಟ್ ಮಾಡಬೇಕು ? ಮತ್ತು ಬಡವರು ತಿನ್ನತಕ್ಕ ಅಕ್ಕಿಗೆ ಎಷ್ಟು ಪರ್ಸೆಂಟ್ ಪಾಲಿಷ್ ಮಾಡಬೇಕೆಂದು ಇದೆ ಅದನ್ನಾದರೂ ಹೇಳುತ್ತೀರಾ ?

SRI MANIKRAO PATIL.—At the moment I do not have definite information as to what is the standard we have fixed for polishing. If the hon. Member wants, I will give it tomorrow.

MR. SPEAKER.—Next item.